Subject Code : **01**

# KANNADA

**March, 2014**

*Time* : 3 *Hours* 15 *Minutes* ] [ *Total No. of Questions* : 55 ] [ *Max. Marks* : 100

## ಅ – ವಿಭಾಗ

I. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ : 10 × 1 = 10

1) ಭೀಮನ ಸಿಂಹನಾದದಿಂದ ಬ್ರಹ್ಮಾಂಡವು ಏನಾಯಿತು ?

2) ಸುಂಕಕಂಜಿದವನು ಯಾವಾಗ ನಡೆದನು ?

3) ರೈತರು ಮಣ್ಣನ್ನು ಹೇಗೆ ಸಮ ಮಾಡುತ್ತಾರೆ ?

4) ಕಾಲಿಗೆ ಗೆಜ್ಜೆ ಕಟ್ಟಿಕೊಂಡಿದ್ದವನು ಯಾರು ?

5) ಕುವೆಂಪು ಅವರಿಗೆ ದೀಕ್ಷೆ ಕೊಟ್ಟ ಗುರು ಯಾರು ?

6) ಗಂಡನು ಜೊಹಾರ್‌ಗೆ ತಲಾಖ್ ನೀಡಿ ಈಗ ಎಷ್ಟು ತಿಂಗಳಾಯಿತು ?

7) ನ್ಯೂಯಾರ್ಕ್ ವಿಮಾನ ನಿಲ್ದಾಣದ ಹೆಸರೇನು ?

8) ಸೈನಿಕರಿಗೂ ಚಳ್ಳೆಹಣ್ಣು ತಿನ್ನಿಸುವ ಕಾಡಿನ ಗಂಡು ಯಾರು ?

9) ಶಕ್ತಿ ಇಲ್ಲದವರು ಯಾವುದರ ಮೊರೆ ಹೋಗುತ್ತಾರೆ ?

10) ಶಬ್ದವೇಧಿ ಎಂದರೇನು ?

## ಆ - ವಿಭಾಗ

II. ಅ) ಈ ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ : $4 \times 2 = 8$

11) ಚಂದ್ರಮತಿ ಕಾಡಿನಲ್ಲಿ ಮಗನನ್ನು ಹೇಗೆ ಕರೆದಳು ?

12) ಮುಕ್ತಿಗಾಗಿ ಯಾರನ್ನು ಹೇಗೆ ಧ್ಯಾನ ಮಾಡಬೇಕು ?

13) ಮಡದಿಯನ್ನು ಹೇಗೆ ಒಲಿಸಿಕೊಳ್ಳಬೇಕೆಂದು ಹೊನ್ನಮ್ಮ ಹೇಳುತ್ತಾಳೆ ?

14) ರಾಮು, ಅಲ್ಲಾ ಎಲ್ಲಿದ್ದಾರೆಂದು ಕವಿ ಹೇಳಿದ್ದಾನೆ ?

15) ತಂಗಿ ಹುಟ್ಟಿದಾಗ ಅಕ್ಕನ ಪ್ರತಿಕ್ರಿಯೆ ಹೇಗಿತ್ತು ?

ಆ) ಈ ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ : $3 \times 2 = 6$

16) ಟ್ಯಾಕ್ಸಿ ಡ್ರೈವರ್‌ನನ್ನು ನೋಡಿ ಲೇಖಕರಿಗೆ ಏನೆನ್ನಿಸಿತು ?

17) ಶೈಕ್ಷಣಿಕವಾಗಿ ಮುಖ್ಯವಾಗುವ ಎರಡು ನಿರ್ದಿಷ್ಟ ಕ್ಷೇತ್ರಗಳು ಯಾವುವು ?

18) ಮರಿಸ್ಸಾ ಹುಟ್ಟಿದ ತಕ್ಷಣ ಬೋನ್ ಮ್ಯಾರೋ ವರ್ಗಾವಣೆ ಮಾಡಲು ಏಕೆ ಸಾಧ್ಯವಿರಲಿಲ್ಲ ?

19) ರಾಜನು ತಳಾರನನ್ನು ಕರೆದು ಏನೆಂದು ಹೇಳಿದನು ?

ಇ) ಈ ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ : $3 \times 2 = 6$

20) ಮರವನ್ನು ಕುರಿತು ಶೆಟ್ಟಿ ಹೇಳುವ ಮಾತುಗಳಾವುವು ?

21) ಕಲಿಯುವ ಕುತೂಹಲವನ್ನು ಏಕಲವ್ಯ ಹೇಗೆ ವ್ಯಕ್ತಪಡಿಸುತ್ತಾನೆ ?

22) ಯುದ್ಧ ತಂತ್ರವನ್ನು ಕೃಷ್ಣ ವಿವರಿಸಿದ್ದು ಹೇಗೆ ?

23) ಏಕಲವ್ಯನನ್ನು ಗಾಳಣ್ಣ ಹೇಗೆ ಪರಿಚಯಿಸುತ್ತಾನೆ ?

## ಇ - ವಿಭಾಗ

III. ಅ) ಈ ಕೆಳಗಿನ ಯಾವುದಾದರೂ **ಎರಡು** ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯಗಳನ್ನು ಬರೆಯಿರಿ : $2 \times 3 = 6$

24) ಚಿಃ ಸತ್ತರೇಂ ಪುಟ್ಟರೆ.

25) ಸದ್ಭಕ್ತರಿಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು.

26) ಬಾಲೆಯ ಬಣ್ಣವಾತಿನಿಂದೊಲಿಸಿಯೊತ್ತಿಗೆ ಬರಿಸುವುದು.

ಆ) ಈ ಕೆಳಗಿನ ಯಾವುದಾದರೂ **ಒಂದು** ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ಬರೆಯಿರಿ : $1 \times 3 = 3$

27) ಅಜ್ಜನ ಆಟದ ಸಾಮಾನುಗಳಿಂದೇ ಅವರು ತಿಳಿದಿದ್ದರು.

28) ಅಜ್ಜಿ ಹೇಳಿದ ಹಾಗೆ ಕೇಳಿಕೊಂಡಿರಿ.

ಇ) ಈ ಕೆಳಗಿನ ಯಾವುದಾದರೂ **ಒಂದು** ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ಬರೆಯಿರಿ : $1 \times 3 = 3$

29) ವಿದ್ಯೆಗೆ ಅಂತಸ್ತಿನ ಅಂತರವಿಲ್ಲ.

30) ನನ್ನನ್ನು ಮೀರಿಸಿದ ಬಿಲ್ಲುಗಾರನಾಗಿದ್ದೀಯೆ.

## ಈ - ವಿಭಾಗ

IV. ಅ) ಈ ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $3 \times 4 = 12$

31) ಕಾಡಿನಲ್ಲಿ ಮಗನಿಗೇನಾಗಿರಬಹುದೆಂದು ಚಂದ್ರಮತಿ ಕಲ್ಪಿಸಿಕೊಂಡಳು ?

32) ಕಪ್ಪು, ಶಕ್ತಿ ಸಾಮರ್ಥ್ಯದ ಪ್ರತೀಕವೆಂದು ಪೂರ್ವಾಂಗನೆ ಹೇಗೆ ಸ್ಪಷ್ಟಪಡಿಸಿದ್ದಾಳೆ ?

33) ಭೀಮನಲ್ಲಿ ಬರುತ್ತಿರುವ ಹಳೆಯ ನೆನಪುಗಳು ಯಾವುವು ?

34) ಪೆಟ್ರೊಮ್ಯಾಕ್ಸ್ ಹೊತ್ತವರ ದುಃಸ್ಥಿತಿಯನ್ನು ಕವಿ ಹೇಗೆ ವರ್ಣಿಸಿದ್ದಾನೆ ?

ಆ) ಈ ಕೆಳಗಿನ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $2 \times 4 = 8$

35) ಕಾರಿನ ಚಾಲಕಿ ಸಿಟ್ಟಿನಿಂದ ದೌಡಾಯಿಸಿದ್ದು ಏಕೆ ? ವಿವರಿಸಿ.

36) ಮರಿಸ್ವಾಳನ್ನು ನೋಡಿಕೊಂಡ ಶಿಶುತಜ್ಞ ಡಾ॥ ರಡಾಲ್ಫ್‌ರ ವಾದವೇನು ? ವಿವರಿಸಿ.

37) 'ಸುದಾಮೆ ಮಾತಿಗೆ ತಪ್ಪದ ಹೆಣ್ಣು' ಹೇಗೆ ? ವಿವರಿಸಿ.

ಇ) ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $2 \times 4 = 8$

38) ಏಕಲವ್ಯನ ಸಾಹಸಗಳನ್ನು ಮೇಳದವರು ಹೇಗೆ ಬಣ್ಣಿಸುವರು ?

39) ಸೈನಿಕರ ಸಂಭಾಷಣೆಯಲ್ಲಿ ಯುದ್ಧದ ಅಪ್ರಯೋಜಕತೆ ಹಾಗೂ ವ್ಯರ್ಥ ಹಾನಿಗಳು ಹೇಗೆ ವ್ಯಕ್ತವಾಗಿವೆ ? ವಿವರಿಸಿ.

40) ಏಕಲವ್ಯನು ತನ್ನ ಮತ್ತು ಕರ್ಣನಲ್ಲಿರುವ ವ್ಯತ್ಯಾಸವನ್ನು ಹೇಗೆ ವಿವರಿಸುತ್ತಾನೆ ?

## ಉ – ವಿಭಾಗ

V. ಅ) ಈ ಕೆಳಗಿನ ಯಾವುದಾದರೂ *ಒಂದು* ಪದ್ಯದ ಭಾವಾರ್ಥವನ್ನು ಬರೆಯಿರಿ : $1 \times 5 = 5$

41) ಅನಿಲತನೂಜನ ಸಿಂಹ

ಧ್ವನಿಯಂ ಕೇಳ್ದಳ್ಕಿ ತತ್ಸರೋವರದೆರ್ದೆ ಪ

ವ್ವನೆ ಪಾರುವಂತೆ ಪಾರಿದು

ವನಾಕುಳಂ ಕೊಳದೊಳಿರ್ದ ತದ್ವಿಹಗಕುಳಂ

**ಅಥವಾ**

42) ಕರಿಯಿನಿತ್ತಡೆ ಒಲ್ಲೆ ಸಿರಿಯಿತ್ತಡೆ ಒಲ್ಲೆ

ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ

ನಿಮ್ಮ ಶರಣರ ಸೂಳ್ನುಡಿಯ ಒಂದರಘಳಿಗೆಯಿತ್ತಡೆ

ನಿನ್ನನಿತ್ತೆ ಕಾಣಾ ! ರಾಮನಾಥ.

ಆ) **ಭಾಷಾಭ್ಯಾಸ**

ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಆರಕ್ಕೆ** ಆಯಾ ಸೂಚನೆಗೆ ಅನುಗುಣವಾಗಿ ಉತ್ತರ ಬರೆಯಿರಿ :

$6 \times 2 = 12$

43) ಈ ಪದಗಳಿಗೆ ಅರ್ಥಗಳನ್ನು ಬರೆಯಿರಿ :

ದ್ರುಮ, ಜಂಬುಕ.

44) ಈ ಪದಗಳ ಕ್ರಿಯಾಧಾತುಗಳನ್ನು ಬರೆಯಿರಿ :

ಗೆದ್ದನು, ಬಂದನು.

45) ಈ ಪದಗಳಿಗೆ ವಿಭಕ್ತಿಯನ್ನು ಬರೆಯಿರಿ :

ಕಾಂತಾರದೊಳ್, ಕೃಷ್ಣನಿಂದ.

46) ಈ ಪದಗಳಿಗೆ ತತ್ಸಮ – ತದ್ಭವಗಳನ್ನು ಬರೆಯಿರಿ :

ಸ್ತಂಭ, ಶರ್ಕರ.

47) ಈ ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ :

ಸರ, ಅಡಿ.

48) ಯಾವುದಾದರೂ ಎರಡು ರೂಢನಾಮ ಪದಗಳನ್ನು ಬರೆಯಿರಿ.

49) ಈ ಪದಗಳಿಗೆ ನಿಷೇಧಾರ್ಥ ರೂಪಗಳನ್ನು ಬರೆಯಿರಿ :

ಹೋದನು, ಬರೆದನು.

ಇ) ಈ ಕೆಳಗಿನ ಯಾವುದಾದರೂ **ಒಂದನ್ನು** ಕುರಿತು 15 ವಾಕ್ಯಗಳಿಗೆ ಮೀರದಂತೆ ಒಂದು ಪ್ರಬಂಧವನ್ನು ಬರೆಯಿರಿ :

$1 \times 5 = 5$

50) ಪತ್ರಿಕೆಗಳ ಮಹತ್ವ

51) ರೈತರ ಸಮಸ್ಯೆಗಳು

ಈ) *ಪತ್ರಲೇಖನ*

ಈ ಕೆಳಗಿನ ಯಾವುದಾದರೂ **ಒಂದನ್ನು** ಕುರಿತು ಪತ್ರ ಬರೆಯಿರಿ : $1 \times 4 = 4$

52) ನಿಮ್ಮ ಕಾಲೇಜಿನಲ್ಲಿ ನಡೆದ ಸಾಂಸ್ಕೃತಿಕ ಚಟುವಟಿಕೆಗಳನ್ನು ಕುರಿತು ನಿಮ್ಮ ಗೆಳೆಯ/ಗೆಳತಿಗೆ ಒಂದು ಪತ್ರ ಬರೆಯಿರಿ.

53) ನಿಮ್ಮ ಉನ್ನತ ವಿದ್ಯಾಭ್ಯಾಸಕ್ಕಾಗಿ ಸಾಲ ಸೌಲಭ್ಯವನ್ನು ಕೋರಿ ಬ್ಯಾಂಕಿನ ಅಧಿಕಾರಿಗೆ ಮನವಿ ಪತ್ರವೊಂದನ್ನು ಬರೆಯಿರಿ.

ಉ) ಈ ಕೆಳಗಿನ ಗಾದೆಗಳಲ್ಲಿ **ಒಂದನ್ನು** ವಿಸ್ತರಿಸಿ ಬರೆಯಿರಿ : $1 \times 4 = 4$

54) ಅಲ್ಪರ ಸಂಗ ಅಭಿಮಾನ ಭಂಗ.

55) ಆಳಾಗಬಲ್ಲವನು ಅರಸಾಗಬಲ್ಲ.